ಜಾತೀಯತೆ ಎಂಬ ಜಾಡ್ಯ: ಒಂದು ಚಿಂತನೆ

ಎಲ್.ಸಿ. ರಾಜು*

DOI: https://doi.org/10.5281/zenodo.24337673

ABSTRACT

'ಜಾತೀಯತೆ' ಎಂಬುದು ಸಮಾಜದ ಒಟ್ಟು ವ್ಯವಸ್ಥೆಯೊಳಗೆ ಜಡ್ಡುಗಟ್ಟಿ ನಿಂತಿರುವ ಅತ್ಯಂತ ದೊಡ್ಡ ಕಳಂಕ. ಬುದ್ಧ, ಬಸವ, ಅಂಬೇಡ್ಕರ್ ಮುಂತಾದ ಮಹನೀಯರು ಈ ಜಾತೀಯತೆಯನ್ನು ನಿರ್ಮೂಲನೆಗೊಳಿಸಿ ಮಾನವೀಯತೆಯನ್ನು ನೆಲೆಗೊಳಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಆದರೂ, ಜಾತಿಪದ್ಧತಿಯ ಮಹಾಭೂತ ನಮ್ಮ ಸಾಮಾಜಿಕ ಪರಿಸರದಿಂದ ಇನ್ನೂ ಸಂಪೂರ್ಣವಾಗಿ ಉಚ್ಚಾಟನೆಗೊಳ್ಳದಿರುವುದು ಶೋಚನೀಯ.

ಈ ಹಿನ್ನೆಲೆಯಲ್ಲಿ ಜಾತೀಯತೆ ಎಂಬ ಅನಿಷ್ಟ ಆಚಾರವನ್ನು ಕುರಿತಂತೆ ವೇದಗಳಲ್ಲಿ ಉಕ್ತವಾಗಿರುವ ಕೆಲವಾರು ಮಹತ್ವದ ಸಂಗತಿಗಳನ್ನು ಆಧಾರವಾಗಿರಿಸಿಕೊಂಡು, ಪ್ರಮುಖವಾಗಿ ಬಸವಣ್ಣನವರ ಚಿಂತನೆಯ ನೆಲೆಯನ್ನು ಪ್ರಧಾನವಾಗಿ ಪರಿಗಣಿಸಿ, ವಸ್ತುನಿಷ್ಠವಾಗಿ ಚರ್ಚಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

KEYWORDS: ಜಾತೀಯತೆ, ವರ್ಣವ್ಯವಸ್ಥೆ, ಶರಣರ ಚಿಂತನೆ, ಸಾಮಾಜಿಕ ಪರಿಸರ, ಅಂತರ್ಜಾತೀಯ ವಿವಾಹ, ಮಾನವ ಧರ್ಮ.

* **ಡಾ. ಎಲ್.ಸಿ. ರಾಜು,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಜಾತಿಯ ಪರಿಕಲ್ಪನೆಯ ಹುಟ್ಟು ಹೇಗಾಯಿತೆನ್ನುವ ಜಿಜ್ಞಾಸೆಗೆ ತೊಡಗಿದಲ್ಲಿ, ಅದು ಚಾತುರ್ವರ್ಣಗಳ ಜೊತೆಯಲ್ಲೇ ಉಗಮವಾಗಿರಬಹುದೆಂದು ಭಾವಿಸಬಹುದಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಎಂಬಂತಹ ಶ್ರಮ ವಿಭಜನೆ ಮಾಡಬೇಕಾದ ದೃಷ್ಟಿಯಿಂದ ರೂಪಿಸಲಾಯಿತೆನ್ನಲಾಗುವ ಈ ಚಾತುರ್ವರ್ಣ ವ್ಯವಸ್ಥೆಯು ಮನುಷ್ಯ – ಮನುಷ್ಯರನ್ನೇ ವಿಭಜಿಸುತ್ತಾ ಹೊರಟಿದ್ದು ನಿಜಕ್ಕೂ ವಿಪರ್ಯಾಸ! ಅಲ್ಲದೆ, ಈ ನಾಲ್ಕು ವರ್ಣಗಳಲ್ಲೂ ನೂರಾರು ಉಪಜಾತಿಗಳು ಕವಲೊಡೆದು ಇಂದು ಅವು ಹಲವು ಸಾವಿರಗಳಾಗಿ ಮಾರ್ಪಟ್ಟಿರುವುದು ಮತ್ತಷ್ಟು ಸೋಜಿಗ!

"ವೇದವನ್ನು ಕೇಳಿಸಿಕೊಂಡ ಶೂದ್ರನ ಕಿವಿಯಲ್ಲಿ ಕಾದ ಸೀಸವನ್ನು ಹಾಕಬೇಕು; ವೇದವನ್ನು ಉಚ್ಚರಿಸಿದರೆ ಅಂಥ ಶೂದ್ರನ ನಾಲಿಗೆಯನ್ನು ತುಂಡರಿಸಬೇಕು; ವೇದದ ಅರ್ಥ ತಿಳಿದುಬಿಟ್ಟರೆ ಅವನ ತಲೆಯನ್ನೇ ಕತ್ತರಿಸಬೇಕು" – ಎಂಬ ಕ್ರೂರ ನಿಲುವುಗಳನ್ನು ಪ್ರತಿಪಾದಿಸುತ್ತದೆನ್ನುವ ಧರ್ಮಶಾಸ್ತ್ರದ ಬಗೆಗಿನ ವಿಚಾರಗಳನ್ನು ನಾವೆಲ್ಲರೂ ಗಮನಿಸುತ್ತಲೇ ಬಂದಿದ್ದೇವೆ. ಆದರೆ ಈ ನಿಲುವಿಗೆ ವ್ಯತಿರಿಕ್ತವಾಗಿರುವ ಇದೇ ಧರ್ಮಶಾಸ್ತ್ರದ ಒಂದು ಶ್ಲೋಕ ಹೀಗೆ ಹೇಳುತ್ತದೆ:

ಶೂದ್ರೋ ಬ್ರಾಹ್ಮಣತಾಮೇತಿ
ಬ್ರಾಹ್ಮಣಶ್ಚೈತಿ ಶೂದ್ರತಾಂ
ಕ್ಷತ್ರಿಯಾಜ್ಜಾತಮೇವಂತು
ವಿದ್ಯಾದ್ವೈಶ್ಯಾತ್ತಥೈವಚ

ಈ ಶ್ಲೋಕ ಹೇಳುವ ಅರ್ಥದ ಪ್ರಕಾರ ಶೂದ್ರನೂ ಬ್ರಾಹ್ಮಣನಾಗಬಲ್ಲ! ಆದರೆ, ಇದೇ ಧರ್ಮಶಾಸ್ತ್ರ 'ಶೂದ್ರನಿಗೆ ವೇದಾಧ್ಯಯನ ಸಲ್ಲದು; ಹಾಗೆ ಮಾಡಿದರೆ ಅದು ಶಿಕ್ಷಾರ್ಹ ಅಪರಾಧ' ಎನ್ನುತ್ತದೆ! ಇದು ವಿರೋಧಾಭಾಸದ ಅಭಿವ್ಯಕ್ತಿಯಲ್ಲದೆ ಮತ್ತೇನೂ ಅಲ್ಲ.

ವರ್ಣವ್ಯವಸ್ಥೆಯನ್ನು ಶ್ರೇಣೀಕರಣಗೊಳಿಸಿ ಮಾತನಾಡುವ ಕೆಲವು ವಿದ್ವಾಂಸರು ತಮ್ಮ ವಾದಕ್ಕೆ ಸರ್ವೇ ಸಾಮಾನ್ಯವಾಗಿ ಉಲ್ಲೇಖಿಸುವ ಮತ್ತು ಅದಕ್ಕೆ ತಮಗೆ ಅನುಕೂಲಕರವಾದ ರೀತಿಯಲ್ಲಿ ವ್ಯಾಖ್ಯಾನ ನೀಡುವ ಯಜುರ್ವೇದದ ಪುರುಷ ಸೂಕ್ತದಲ್ಲಿ ಉಕ್ತವಾಗಿರುವ ಒಂದು ಶ್ಲೋಕ ಇಂತಿದೆ:

ಬ್ರಾಹ್ಮಣೋಸ್ಯ ಮುಖಮಾಸೀದ್ಬಾಹೂ
ರಾಜನ್ಯಃ ಕೃತಃ
ಊರೂ ತದಸ್ಯ ಯದ್ವೈಶ್ಯಃ
ಪದ್ಭ್ಯಾಂ ಶೂದ್ರೋ ಅಜಾಯತ

ಇಲ್ಲಿನ ವಿರಾಟ್ ಪುರುಷನ ರೂಪ ಒಂದು ಸಾಂಕೇತಿಕ ಪರಿಕಲ್ಪನೆ. ಆತನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ,

ಪಾದಗಳಿಂದ ಶೂದ್ರರೂ ಉತ್ಪನ್ನರಾದರು – ಇದು ಈ ಶ್ಲೋಕಕ್ಕೆ ಕೆಲವು ವಿದ್ವಾಂಸರು ನೀಡುತ್ತಾ ಬಂದಿರುವ ವ್ಯಾಖ್ಯಾನ. ಆದರೆ, ಇದರ ನಿಜವಾದ ಸಾರಾಂಶ ಅದಲ್ಲ ಎನ್ನುವುದನ್ನು ಬಸವಣ್ಣನವರಂತಹ ಕೆಲವಾರು ಪ್ರಾಜ್ಞರು ವಿಶ್ಲೇಷಣಾತ್ಮಕವಾಗಿ ವಿವರಿಸಿದ್ದಾರೆ. ಈ ಮಂತ್ರಕ್ಕೆ ಅರ್ಥ ಹೇಳುವ ಮುನ್ನ ಇದರ ಹಿಂದಿನ ಮಂತ್ರವನ್ನು ನೋಡಬೇಕಾಗುತ್ತದೆಂಬುದು ಇವರ ಅಭಿಪ್ರಾಯ. ಅಲ್ಲಿ ಒಂದು ಪ್ರಶ್ನೆ ಬರುತ್ತದೆ: 'ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ (ಈ ಪುರುಷನ ಮುಖವಾವುದು? ಇವನ ಬಾಹುಗಳು ತೊಡೆಗಳು ಪಾದಗಳು ಯಾವುವು?)'. ವಿರಾಟ್ ಪುರುಷನನ್ನು ಯಜ್ಞಾಹುತಿ ರೂಪದಲ್ಲಿ ಅರ್ಪಿಸಲು ಸಂಕಲ್ಪಿಸಿದಾಗ ಅವನನ್ನು ಎಷ್ಟು ಪ್ರಕಾರವಾಗಿ ವಿಭಾಗಿಸಿದರು ಎಂದು ಕೇಳುವಾಗ ಈ ಪ್ರಶ್ನೆ ಬರುತ್ತದೆ. ಈ ಪ್ರಶ್ನೆಗೆ ಉತ್ತರವೇ ಮೇಲ್ಕಂಡ ಶ್ಲೋಕ. ಈ ಶ್ಲೋಕಕ್ಕೆ ನಿಜವಾಗಿ ನೀಡಬೇಕಾಗಿರುವ ವಿವರಣೆ ಹೀಗಿದೆ:

ವಿರಾಟ್ ಪುರುಷನಿಗೆ 'ಬ್ರಾಹ್ಮಣನು ಮುಖವಾಗಿ ಪರಿಣಮಿಸಿದನು' ಎಂದು ಅರ್ಥೈಸಬಹುದೇ ಹೊರತು 'ಮುಖದಿಂದ ಹುಟ್ಟಿದವನು' ಎಂದಲ್ಲ. ಯಾರು ಬ್ರಹ್ಮಜ್ಞಾನವನ್ನು ಪಡೆದು ಬ್ರಾಹ್ಮಣನಾಗುತ್ತಾನೋ ಅವನು ಆ ವಿರಾಟ್ ಪುರುಷನ ಮುಖಸ್ವರೂಪನಾಗಿ ಪರಿಣಮಿಸುತ್ತಾನೆ. ಹಾಗೆಯೇ ಇತರರು. ಪಾದಸ್ವರೂಪನಾಗಿದ್ದವನು ಜ್ಞಾನವನ್ನು ಬೆಳೆಸಿಕೊಳ್ಳುತ್ತಾ ಮುಖಸ್ವರೂಪನಾಗಿ ಪರಿಣಮಿಸಬಹುದು. ಆದ್ದರಿಂದ, ಶೂದ್ರ ಎನ್ನುವುದು ಪಾದದಿಂದ ಹುಟ್ಟಿದ ಅಥವಾ ಬ್ರಾಹ್ಮಣ ಎನ್ನುವುದು ಮುಖದಿಂದ ಹುಟ್ಟಿದ ಜಾತಿಯಲ್ಲ; ಅದೊಂದು ಮನೋಧರ್ಮ. ಮನುಷ್ಯನ ಜನನ ಮುಖ, ಬಾಹು, ತೊಡೆ, ಪಾದಗಳಿಂದ ಹೇಗೆ ಸಾಧ್ಯ? ಯೋಚಿಸಬೇಕಾದ ವಿಚಾರ!

ಸಪ್ತಧಾತು ಸಮಂ
ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮುತ್ಪನ್ನಂ
ವರ್ಣಾನಾಂ ಕಿಂ ಪ್ರಯೋಜನಂ

ಎಂಬ ಶ್ಲೋಕವನ್ನು ಈ ವಿಚಾರಕ್ಕೆ ಪೂರಕವಾಗಿ ಗಮನಿಸಬಹುದು. ಮಹಾಮಾನವತಾವಾದಿ ಬಸವಣ್ಣನವರ ಆಲೋಚನೆಗಳೂ ಇದೇ ನೆಲೆಯಿಂದಲೇ ಹೊರಟಿರುವಂತಹವು. ಅವರ ಅಭಿಪ್ರಾಯದಲ್ಲಿ ಜಾತಿ ನಿರ್ಧಾರವಾಗಬೇಕಾದುದು ವೃತ್ತಿಯ ಆಧಾರದಿಂದಲ್ಲ, ಸ್ವಭಾವದ ಆಧಾರದಿಂದ! ಅದಕ್ಕೆಂದೇ ಅವರು ಹೇಳುವುದು: "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ". ಬಸವಣ್ಣನವರ ಪ್ರಕಾರ, ವೇದವನ್ನು ಓದಿದರೆ ಶೂದ್ರನೂ ಕೂಡ ಬ್ರಾಹ್ಮಣನಾಗಬಲ್ಲ!

ವಿಪರ್ಯಾಸವೆಂದರೆ, ಸಮಾಜದ ಪ್ರತಿಗಾಮಿ ವ್ಯವಸ್ಥೆಯು ಶೂದ್ರನ ಮೇಲೆ ವೇದಾಧ್ಯಯನದ ನಿರ್ಬಂಧ ಹೇರಿ ಆತ ವೇದವನ್ನು ಕಲಿಯದಂತೆ ಎಚ್ಚರ ವಹಿಸುತ್ತಾ

ಬಂದಿದೆ. ಆಶ್ಚರ್ಯವೆಂದರೆ, ಇದೇ ವೇದದಲ್ಲೇ ಶೂದ್ರನಿಗೂ ವೇದಗಳನ್ನು ಕಲಿಸಿಕೊಡಬೇಕೆಂಬ ಆಗ್ರಹಪೂರ್ವಕ ಒತ್ತಾಯವಿದೆ!

यथेमां वाचं कल्याणीमदानि जनेभ्यः
ब्रह्मराजन्याभ्यां शूद्राय चार्याय च स्वाय चारणाय
प्रियोदेवानां दक्षिणायै दातुरिहभयासमयं
मे कामः समृध्यतामुमादो नमतु

ಇದು ಯಜುರ್ವೇದದಲ್ಲಿ ಇರುವ ಒಂದು ಮಂತ್ರ. ''ಕಲ್ಯಾಣಸಾಧಕವಾದ ಈ ವಾಣಿಯನ್ನು ಎಲ್ಲ ಮಾನವರ ಉಪದೇಶಕ್ಕಾಗಿ ನಾನು ಹೇಗೆ ಉಪದೇಶಿಸಿದೆನೋ ಅದರಂತೆ ಎಲ್ಲ ಮಾನವರಿಗೂ ಅವುಗಳನ್ನು ಬೋಧಿಸಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅತಿ ಶೂದ್ರನಿಗೂ ಇವುಗಳನ್ನು ಹೇಳಬೇಕು..... ನಾನು ಪಕ್ಷಪಾತವಿಲ್ಲದೆ ವಿದ್ವಾಂಸರಿಗೆ ಹೇಗೆ ಪ್ರಿಯನಾಗಿರುವೆನೋ ಹಾಗೆ ನೀವು ಕೂಡ ಈ ವಾಣಿಯನ್ನು ಉಪದೇಶಿಸಬೇಕು. ಇದರಿಂದ ನಿಮಗೆ ಇಷ್ಟಾರ್ಥಗಳು ಲಭಿಸಲಿ. ಇದೇ ನಿಮಗೆ ನಾನು ನೀಡುವ ಆಶೀರ್ವಾದ'' – ಇದು ಈ ಮಂತ್ರದ ಅರ್ಥ! ಆದರೆ, ಈ ಅರ್ಥದ ಪ್ರಕಾರ ನಡೆದುಕೊಳ್ಳಲಾಗುತ್ತಿದೆಯೇ ಎಂಬುದು ಸ್ಪಷ್ಟ ಉತ್ತರ ಕಾಣದ ಪ್ರಶ್ನೆಯಾಗಿಯೇ ಉಳಿದಿದೆ.

ಈ ಎಲ್ಲ ಆದರ್ಶಗಳನ್ನು ಡಾಂಭಿಕವಾಗಿ ಬೊಗಳೆ ಹೊಡೆಯುವ ಸಂಪ್ರದಾಯವಾದಿಗಳ ವರ್ತನೆಗೆ ಸಿಡಿದೆದ್ದ ಬಸವಣ್ಣನವರು ಯಜ್ಞೋಪವೀತವನ್ನು ಕಿತ್ತೆಸೆದು ಆ ನಾಟಕೀಯ ಆವರಣದಿಂದ ಹೊರಬಂದರು; ಸಮಾನತೆಯ ಸಾಕಾರಕ್ಕಾಗಿ ಮಹಾಮನೆಯನ್ನು ನಿರ್ಮಿಸಿದರು; ಅಸ್ಪೃಶ್ಯರಾದಿಯಾಗಿ ಎಲ್ಲರಿಗೂ ಅಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟು ಅನುಭಾವ ಮಂಟಪದ ಆಶ್ರಯದಲ್ಲಿ ಅವರನ್ನೆಲ್ಲಾ ಸುಸಂಸ್ಕೃತರನ್ನಾಗಿಸಿ ಸಂಪ್ರದಾಯವಾದಿಗಳಿಗೆ ಸವಾಲಾಗಿ ನಿಂತರು! ಕೇತ, ಹರಳಯ್ಯ, ಕಂಬಳಿನಾಗದೇವ, ಹೆಂಡದ ಮಾರಯ್ಯ, ಅಂಬಿಗರ ಚೌಡಯ್ಯ, ಕಿನ್ನರಿ ಬ್ರಹ್ಮಯ್ಯ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಮಾದಾರ ಧೂಳಯ್ಯ, ಗೌರವ್ವೆ, ಕೊಟ್ಟಣದ ಸೋಮವ್ವೆ, ಶಿವಮಾಯಿದೇವಿ, ವಿಮಳಾದೇವಿ, ತೊಂಗಿನ ಮಹಾದೇವಿ, ಸಿದ್ದದೇವಮ್ಮ, ಕಲ್ಯಾಣಮ್ಮ, ಲಿಂಗಮ್ಮ, ರಾಯಮ್ಮ, ಲಕ್ಕಮ್ಮ – ಇತ್ಯಾದಿಯಾಗಿ ಎಲ್ಲರೂ ಇಲ್ಲಿ ಸಮಾನರು. ಬಸವಣ್ಣನವರು ಆಡಿದ್ದನ್ನು ಮಾಡಿ ತೋರಿಸಿದ ಈ ಕಾರ್ಯ ಕಡಿಮೆ ಸಾಧನೆಯೇನಲ್ಲ.

ಆದರೆ, ಈ ಬೆಳವಣಿಗೆಯು ಕೆಲವಾರು ಮೂಲಭೂತವಾದಿಗಳಿಗೆ ಅರಗಿಸಿಕೊಳ್ಳಲಾಗದ ಆಚಾರವಾಗಿತ್ತು. ಜೊತೆಗೆ, ಅವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದುದು ಬಸವಣ್ಣನವರು ಮಾಡಿಸಿದ ಶೀಲವಂತ ಮತ್ತು ಕಲಾವತಿಯರ ಮದುವೆ. ಶೀಲವಂತ, ಅಸ್ಪೃಶ್ಯ ಹರಳಯ್ಯನ ಮಗ; ಕಲಾವತಿ, ಬ್ರಾಹ್ಮಣ ಮಧುವರಸನ ಮಗಳು. ಇದು ಕೇವಲ ಆದರ್ಶದ ಪರಿಪಾಲನೆಗಾಗಿ ಮಾಡಿಸಿದ ಬಲವಂತದ

ಮದುವೆಯಲ್ಲ; ಪರಸ್ಪರ ವಧು–ವರರು ಒಪ್ಪಿ, ಹಿರಿಯರು ಒಪ್ಪಿ, ನಡೆಸಿದ ಅಪೂರ್ವ ಮದುವೆಯಾಗಿತ್ತು. ಆದರೆ, ಈ ಮದುವೆಯ ಪರಿಣಾಮ ತೀರಾ ಆಘಾತಕರವಾಗಿ ಪರಿಣಮಿಸಿದುದು ಬಸವಣ್ಣನವರನ್ನು ತೀವ್ರವಾಗಿ ನೋಯಿಸಿತು. ಕೆಲವು ಮೂಲಭೂತವಾದಿಗಳ ಹುನ್ನಾರದಿಂದಾಗಿ ಹರಳಯ್ಯ–ಮಧುವರಸರ ಭೀಕರ ಹತ್ಯೆಯಾಗಿ, ಇದೇ ನೆಪದಿಂದ ಬಿಜ್ಜಳನ ಕೊಲೆಯೂ ಆದದ್ದು ಇತಿಹಾಸದಲ್ಲುಳಿದ ಅಳಿಸಲಾಗದ ಕಪ್ಪುಮಚ್ಚೆ! ಒಟ್ಟಾರೆಯಾಗಿ, ಜಾತೀಯತೆಯ ಈ ವಿಷವ್ಯೂಹಕ್ಕೆ ಸಿಲುಕಿ ಇತಿಹಾಸದ ಪುಟಗಳೂ ಕೂಡ ರಕ್ತಸಿಕ್ತವಾಗಿವೆ. ಹಾಗಾಗಿ, ಇಂದಿನ ಪ್ರಜ್ಞಾಪೂರ್ಣ ಯುವಪೀಳಿಗೆಯಲ್ಲಾದರೂ ಜಾತೀಯತೆಯ ಸಂಕುಚಿತ ಮನೋಭಾವನೆ ದೂರವಾಗಿ, ಜಾತ್ಯತೀತ ಭಾವನೆಯು ವಿಸ್ತೃತಗೊಳ್ಳಬೇಕಾದ ಅಗತ್ಯ ಬಹಳಷ್ಟಿದೆ. ಇಲ್ಲವಾದರೆ, ಸಮಾಜದ ಸರ್ವಾಂಗೀಣ ಅಭಿವೃದ್ಧಿ ಸರ್ವಥಾ ಸಾಧ್ಯವಿಲ್ಲದಂತಾಗುತ್ತದೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಇವರಲ್ಲಿ ಯಾರು ಯಾರಿಗೂ ಮೇಲೂ ಅಲ್ಲ, ಕೀಳೂ ಅಲ್ಲ. ಅವರವರ ವೃತ್ತಿಯಲ್ಲಿ ಅವರವರೇ ಮೇಲು. ವರ್ಣಗಳು ಹುಟ್ಟಿನಿಂದಲ್ಲ, ವೃತ್ತಿಯಿಂದ! ಇದನ್ನೇ ಶ್ರೀಕೃಷ್ಣ ಗೀತೆಯಲ್ಲಿ – "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ (ಗುಣ ಮತ್ತು ಕರ್ಮಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುವ ದೃಷ್ಟಿಯಿಂದ, ಮಾನವ ಕುಲವನ್ನು, ನಾಲ್ಕು ವರ್ಣಗಳನ್ನಾಗಿ ವಿಂಗಡಿಸಿದ್ದೇನೆ)" ಎಂದು ಹೇಳಿದ್ದಾನೆ. ಕುವೆಂಪು ಅವರು "ಯಾವಾತನ ಮೊಗದಲ್ಲಿ ತೇಜಸ್ಸು ತೋರುವುದೋ, ಯಾವನೊಳು ಬಾಂದಳದ ಗಾಂಭೀರ್ಯ ಮೆರೆಯುವುದೋ, ಯಾವನು ಸದಾ ಸತ್ಯವಾಡುವನೋ, ಅವನೆಲ್ಲಿಯೇ ಇರಲಿ ಅವನಾರೇ ಆಗಲಿ ಬ್ರಾಹ್ಮಣನು" ಎಂದಿದ್ದಾರೆ.

ವಿಶಾಲ ಅರ್ಥದಲ್ಲಿ, ಬ್ರಾಹ್ಮಣರು ಆಧ್ಯಾತ್ಮ ಜ್ಞಾನದ ವಾರಸುದಾರರು. ಅವರು ಸರಳ ಜೀವಿಗಳಾಗಿದ್ದು, ಜ್ಞಾನದ ಗಣಿಗಳಾಗಿ ಆಧ್ಯಾತ್ಮ ಜ್ಞಾನದ ಪ್ರಚಾರಕರೂ ಪ್ರತಿನಿಧಿಗಳೂ ಆಗಬೇಕು. ಕ್ಷತ್ರಿಯರು ತಮ್ಮ ತೋಳ್ಬಲದಿಂದ ಸಮಾಜವನ್ನು ರಕ್ಷಿಸುವುದು ಮತ್ತು ಸಮಾಜದ ಆಡಳಿತ ವ್ಯವಸ್ಥೆಯನ್ನು ಸುಗಮವಾಗಿ ನಡೆಸುವ ಕಾರ್ಯವನ್ನು ನಿರ್ವಹಿಸಬೇಕು; ನ್ಯಾಯವನ್ನು ಕಾಪಾಡುವುದೂ ಅವರ ಕರ್ತವ್ಯವಾಗಬೇಕು. ವೈಶ್ಯರು ವಾಣಿಜ್ಯ ಧರ್ಮವನ್ನು ಪಾಲಿಸುತ್ತಾ ದುರಾಸೆಯನ್ನು ಬಿಟ್ಟು ಸಮಾಜಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಹಣ ವಿನಿಮಯ ಕಾರ್ಯದಲ್ಲಿ ತೊಡಗಿಕೊಳ್ಳಬೇಕು. ಶೂದ್ರರು ದೇಹವನ್ನು ದಂಡಿಸಿ ದುಡಿಮೆ ಮಾಡಿ ಜನಸೇವೆ ಮಾಡಬೇಕು. ಈ ವೃತ್ತಿಗಳಲ್ಲಿ ಯಾವುದೂ ಮೇಲು ಕೀಳೆನಿಸದೆ ಸಮಾನವಾದ ವೃತ್ತಿಗೌರವವನ್ನು ಪಡೆದುಕೊಳ್ಳಬೇಕು. ಆದರೆ, ಹಾಗೇನೂ ಆಗದೆ, ಇವು ಕ್ರಮೇಣ ಜಾತಿಗಳಾಗಿ ಮಾರ್ಪಟ್ಟು ಹಿಂದೂ ಧರ್ಮದ ಮೂಲವನ್ನೇ ಅಲ್ಲಾಡಿಸುವ ಮಟ್ಟಕ್ಕೆ ಬೆಳೆದು ಬಂದವು. ಕುವೆಂಪು ಅವರು ಜಾತಿಗಳ ಬಗ್ಗೆ–

ಮೊದಲ ತಕ್ಕನು ಮೊದಲ ಬೆಪ್ಪನಂ ಸಂಧಿಸಲು
ಸಂಭವಿಸಿತೆಂಬರು ಮತವೆಂಬ ಮತಿವಿಕಾರಂ

ದೊರೆ ಪುರೋಹಿತರು ಅವಳಿ ಮೊಲೆಯೂಡಿ ಸಲುಹಿದರು
ಮತದ ಮದಿರೆಯನೀಂಟೆ ಮಂಕು ಬಡಿದಿದೆ ಜಗಕ್ಕೆ
ಕೊನೆಯ ದೊರೆಯ ಕೊರಳಿಗಂ ಕೊನೆ ಪುರೋಹಿತನ
ಕರುಳ್ ಉರುಳಾಗುವವರೆಗೆ ಸುಖವಿಲ್ಲವೀ ಧರೆಗೆ

ಎಂದಿದ್ದಾರೆ. ಈ ಎಲ್ಲಾ ವಾಸ್ತವಾಂಶಗಳನ್ನು ಪೂರ್ವಾಗ್ರಹಪೀಡಿತರಾಗದೆ ಅರ್ಥ ಮಾಡಿಕೊಂಡಲ್ಲಿ ನಾವು ಸಮಾನತೆಯ ಹಾದಿಯಲ್ಲಿ ಸಾಗುತ್ತಿದ್ದೇವೆ ಎಂದರ್ಥ. ಒಟ್ಟಾರೆಯಾಗಿ, ಜಾತಿಯನ್ನು ರೂಪಿಸಿಕೊಂಡವರು ಸ್ವತಃ ಮನುಷ್ಯರೇ ಹೊರತು ಮತ್ತಾರೂ ಅಲ್ಲ. ಈಗಿನ ಪರಿಸ್ಥಿತಿಯಲ್ಲಿ ಇದನ್ನು ತೊಡೆದು ಹಾಕಿದ ಹೊರತು ಲೋಕಕ್ಕೆ ಭವಿಷ್ಯವಿಲ್ಲ. ಈ ಸತ್ಯವನ್ನು ಸಹಜ ನೆಲೆಯಲ್ಲಿ ಸ್ವೀಕರಿಸಿದಾಗ ತಾನೇ ತಾನಾಗಿ 'ಮಾನವ ಧರ್ಮ' ರೂಪುಗೊಳ್ಳಲು ಸಾಧ್ಯ.

ಉಪಸಂಹಾರ:

ಜಾತಿಭೇದಗಳ ನಿರ್ಮೂಲನೆಗೆ ಬಹುಶಃ ಅಂತರ್ಜಾತೀಯ ವಿವಾಹಗಳೇ ಮದ್ದು. ಆದರೆ ಈ 'ಮದ್ದು' ಸಮಾಜದ ಬಹುಪಾಲು ಜನಸಮೂಹಕ್ಕೆ ಅಪಥ್ಯವಾಗಿರುವುದರಿಂದ ಜಾತೀಯತೆಯ 'ರೋಗ' ಹಾಗೆಯೇ ಉಳಿದುಬಿಡುವ ಆತಂಕವಂತೂ ಇದ್ದೇ ಇದೆ. ವಾಸ್ತವಿಕವಾಗಿ, ಅಂತರ್ಜಾತಿ ವಿವಾಹಿತರ ಮಕ್ಕಳು ಹೆಚ್ಚು ಆರೋಗ್ಯವಂತರೂ ಬುದ್ಧಿವಂತರೂ ಆಗಿರುತ್ತಾರೆಂದು ವೈದ್ಯಕೀಯ ಹಾಗೂ ವೈಜ್ಞಾನಿಕ ವರದಿಗಳು ಹೇಳುತ್ತವೆ. ಅಂಗವಿಕಲತೆ, ಬುದ್ಧಿಮಾಂದ್ಯತೆ ಮತ್ತು ನಾನಾ ರೀತಿಯ ರೋಗಗಳು ಸಮೀಪ ಸಂಬಂಧಿ, ಸ್ವಜಾತಿ ವಿವಾಹಿತರ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ದೋಷಗಳಾಗಿವೆ.

'ಬಲಿಷ್ಠರ ಬಲಿಷ್ಠ ರಾಷ್ಟ್ರ' ಕಟ್ಟುವ ಗುರಿಯೆಡೆಗೆ ಲಕ್ಷ್ಯವಿರುವ ಯಾವುದೇ ಸುಸಂಸ್ಕೃತ ದೇಶಭಕ್ತ ನಾಗರಿಕನು ಅಂತರ್ಜಾತಿ ವಿವಾಹವನ್ನು ವಿರೋಧಿಸುವುದಿಲ್ಲ. ಮಕ್ಕಳ ಆರೋಗ್ಯ ಹಾಗೂ ಬುದ್ಧಿಮತ್ತೆಗಳು ದೇಶದ ಸಂಪತ್ತು ಎಂದು ತಿಳಿದವರೆಲ್ಲರೂ ಇಂಥ ವಿವಾಹಗಳನ್ನು ಸ್ವಾಗತಿಸುತ್ತಾರೆ.

ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಲು ಸೊಲ್ಲಾಪುರದಲ್ಲಿ 'ಶರಣ ಸಮಾಜ'ವೆಂಬ ಸಂಘವೇ ಸ್ಥಾಪನೆಯಾಗಿದೆ ಎಂಬುದು ಗಮನಾರ್ಹ. ವರ್ಷಕ್ಕೊಮ್ಮೆ ಇಲ್ಲಿಗೆ ಅಂತರ್ಜಾತಿ ವಿವಾಹಿತರನ್ನು ಆಮಂತ್ರಿಸಿ ಪರಸ್ಪರ ಪರಿಚಯಿಸುತ್ತಾರೆ; ಸತ್ಕರಿಸುತ್ತಾರೆ; ಸಮಸ್ಯೆಗಳನ್ನು ಎಲ್ಲರೂ ಸೇರಿ ಚರ್ಚಿಸುತ್ತಾರೆ; ಅಡ್ಡಿ–ಆತಂಕಗಳನ್ನೆದುರಿಸಿ ಧೈರ್ಯದಿಂದಿರಲು ಪ್ರೋತ್ಸಾಹಿಸುತ್ತಾರೆ; ಒಬ್ಬರಿಗೊಬ್ಬರು ಸಹಕರಿಸುತ್ತಾರೆ.

ಹೀಗೆ ಒಂದೆಡೆ ಸೇರುವುದರಿಂದ ಅವರವರ ಸಮಸ್ಯೆಗಳಿಗೆ ಕೆಲಮಟ್ಟಿಗಾದರೂ ಪರಿಹಾರ ದೊರೆತು, ಜೀವನವನ್ನೆದುರಿಸುವ ನವಶಕ್ತಿ ಉಂಟಾಗಿ ಬದುಕಿನಲ್ಲಿ ಉತ್ಸಾಹ ಮೂಡುತ್ತದೆ. ''ಹೆಣ್ಣು–ಗಂಡು ಮನವರಿತು ಕೂಡುವುದೇ ಮದುವೆ'' ಎಂಬ ಅಂಶ ಇಂಥ ಪ್ರಸಂಗಗಳಿಂದ ಮತ್ತಷ್ಟು ಪ್ರಸ್ಫುಟವಾಗುತ್ತದೆ. ಜಾತಿ

ನಿರ್ಧಾರವಾಗಬೇಕಾದುದು ಸ್ವಭಾವದ ಆಧಾರದ ಮೇಲೆಯೇ ಹೊರತು ಮುತ್ತಾತನ ಕಾಲದಲ್ಲಿ ಮಾಡಿ ಹೋದ ಆಚಾರ–ವಿಚಾರಗಳ ಮೇಲಲ್ಲ. ಆದರೆ, ಈ ನೆಲೆಯಲ್ಲಿ ಆಲೋಚಿಸುವ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ ನೀಡುವ ಹೃದಯವಂತಿಕೆ ಸರ್ವರಲ್ಲೂ ಮೊಳಕೆಯೊಡೆಯಬೇಕು.

ಸರಕಾರವೂ ಸಹ ಅಂತರ್ಜಾತಿ ವಿವಾಹಿತರಿಗೆ ವಿಶೇಷವಾದ ಪ್ರೋತ್ಸಾಹ ನೀಡಬೇಕು. ಅವರಿಗೆ ಕೊಡಮಾಡುವ ಸೌಲಭ್ಯಗಳನ್ನು ಹೆಚ್ಚಿಸಿದರೆ, ಮುಖ್ಯವಾಗಿ ನೌಕರಿಗಳನ್ನು ನೀಡಿದರೆ ಪರಿಣಾಮ ಅತ್ಯಂತ ಚೇತೋಹಾರಿಯಾಗಿರುತ್ತದೆ. ವರದಕ್ಷಿಣೆಯ ಪಿಡುಗೂ ಕೂಡ ದೂರವಾಗುತ್ತದೆ. ಸಮಾಜದಲ್ಲಿ ಸೃಷ್ಟಿಯಾಗಿರುವ ವಿಷಫಲಗಳೂ ನಾಶವಾಗುತ್ತವೆ. ಸದೃಢ ಸದ್ಬುದ್ಧಿವಂತ ಜನಾಂಗ ನಿರ್ಮಾಣವಾಗಲು ಅನುವು ಮಾಡಿಕೊಟ್ಟು ಹೊಸ ವೈಚಾರಿಕತೆಗೆ, ಹೊಸದೊಂದು ಮನ್ವಂತರಕ್ಕೆ ಹೊಸ ಆಯಾಮ ಕೊಟ್ಟಂತಾಗುತ್ತದೆ. ಜಾತೀಯ ವೈಷಮ್ಯಗಳನ್ನು ಹೋಗಲಾಡಿಸಿದಂತಾಗುತ್ತದೆ. ಹೀಗೆಲ್ಲಾ ಆಗಲೇಬೇಕಾದುದು ಪ್ರಸ್ತುತ ಸಂದರ್ಭದಲ್ಲಂತೂ ಆರೋಗ್ಯಕರ ಸಮಾಜ ನಿರ್ಮಿತಿಯ ದೃಷ್ಟಿಯಿಂದ ತೀರಾ ಅಗತ್ಯ.

ವೈವಾಹಿಕ ಸಂಬಂಧ ಬೆಳೆಸಲು ಕೆಲವು ಮನಸ್ಸುಗಳು ಹಿಂದೇಟು ಹಾಕಬಹುದು; ಆದರೆ, ಮಾನವ ಸಂಬಂಧಗಳನ್ನು ಬೆಳೆಸಿಕೊಳ್ಳಲು ಹಿಂದೇಟು ಹಾಕುವುದಕ್ಕೆ ಯಾವುದೇ ಕಾರಣಗಳಿಲ್ಲ. ಮನುಷ್ಯ–ಮನುಷ್ಯರ ನಡುವೆ ಮಾನವ ಸಂಬಂಧಗಳು ಬೆಳೆಯದೇ ಹೋದಲ್ಲಿ ನಾವು ನಿಜವಾಗಿಯೂ ಮನುಷ್ಯರಲ್ಲ ಎಂದೇ ಅರ್ಥ!

ಪರಾಮರ್ಶನ ಕೃತಿಗಳು:

1. ತಿಪ್ಪೇರುದ್ರಸ್ವಾಮಿ ಎಚ್., (2010), ಕರ್ತಾರನ ಕಮ್ಮಟ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್.
2. ರಾಜು ಎಲ್. ಸಿ., (1993), ಅಜ್ಜ ನೆಟ್ಟ ಆಲದ ಮರ (‘ಚಿಗುರು’ ಸಂಚಿಕೆ), ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
3. ಕುವೆಂಪು, (2011), ಜಲಗಾರ, ಮೈಸೂರು: ಉದಯರವಿ ಪ್ರಕಾಶನ.
4. ಕುವೆಂಪು, (2022), ಕಾನೀನ, ಮೈಸೂರು: ಉದಯರವಿ ಪ್ರಕಾಶನ.
5. ಮಹಾತ್ಮಾ ಗಾಂಧಿ (ಅನುವಾದ: ಎನ್. ಬಾಲಸುಬ್ರಹ್ಮಣ್ಯ), (1995), ಹಿಂದೂ ಧರ್ಮ ಎಂದರೇನು?, ನವದೆಹಲಿ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.